ಆ) ರಾಜ್ಯದ ಕರಾವಳಿಯ ಉಳ್ಳಾಲ, ಕೋಟೆಪುರ, ಸುರತ್ಕಲ್, ಉದ್ಯಾವರ, ಪಡುಕೆರೆ, ಮಣ್ಣೂರು, ಅಡ್ಡ ಬೆಂಗ್ರೆ, ಹೊನ್ನೆಗದ್ದೆ, ಗೊರಟಿ, ಜಾಲಿ, ತರಂಗ ಮಠ, ಬೆಳಂಬರ, ದೇಶಿನಭಾಗ ದೇವಭಾಗ ಇತ್ಯಾದಿ ಪ್ರದೇಶಗಳಲ್ಲಿ ಒಟ್ಟು 56.19 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಇ) ಹೌದು. ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್, ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಕೆ.ಆರ್. ಸಾಗರ ಇವರಿಂದ ವಿನ್ಯಾಸ ಹಾಗೂ ತಾಂತ್ರಿಕ ಪರಿಣಿತರ ಸಮಿತಿಯ ಸಲಹೆಯನ್ನು ಪಡೆದು ತಡೆಗೋಡೆಯನ್ನು ನಿರ್ಮಿಸಲಾಗುತ್ತಿದೆ. ಅತಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಕೆಲವೊಂದು ಪ್ರದೇಶಗಳನ್ನು ಬಿಟ್ಟು ಹೆಚ್ಚಿನ ಪ್ರದೇಶಗಳಲ್ಲಿ ಈ ವ್ಯವಸ್ಥೆ ಫಲಕಾರಿಯಾಗಿದೆ.

ಫ್ರಾನ್ಸ್ ದೇಶದ ಒಂದು ಕಂಪನಿಯು ಅಭಿವೃದ್ಧಿಪಡಿಸಿ 'ಪೇಟೆಂಟ್' ಆಗಿರುವ 'ಸ್ಟೆಬಿಪ್ಲೇಜ್' ಎಂಬ ತಂತ್ರಜ್ಞಾನವನ್ನು ಅಳವಡಿಸಿ ಮಂಗಳೂರಿನ ಉಳ್ಳಾಲ, ಕೋಟೆಪುರ ಪ್ರದೇಶದಲ್ಲಿ 1.5 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ ಇವರ ವಿನ್ಯಾಸ ಮತ್ತು ಸಲಹೆಯಂತೆ 'ಟಿ' ಗ್ರೋಯಿನ್ಸ್ ನಿರ್ಮಿಸಿ ಉಲ್ಲಾಳ ಪ್ರದೇಶದಲ್ಲಿ ಸಮುದ್ರ ಕೊರೆತೆ ತಡೆಗಟ್ಟುವ ಯೋಜನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು. ಅನುದಾನದ ಕೊರತೆಯಿಂದಾಗಿ ಬಹಳಷ್ಟು ಕಾಮಗಾರಿಗಳ ಬಿಲ್ಲು ಪಾವತಿಗಾಗಿ ಬಾಕಿಯಿರುತ್ತದೆ.

ಉ) ಹೌದು. ಆದರೂ ತುರ್ತು ಪ್ರದೇಶಗಳಲ್ಲಿ ಗುತ್ತಿಗೆದಾರರ ಮನವೊಲಿಸಿ ಕಾಮಗಾರಿ ಪೂರ್ತಿಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಊ) ಅನುದಾನ ಲಭ್ಯತೆಯನ್ವಯ ಪಾವತಿಸಲಾಗುವುದು.

571(198) : ಶ್ರೀ ಕೃಷ್ಣ ಪಾಲೇಮಾರ್ ಕೆ. (ಸೂರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯವು ರೈತರಿಗೆ ಉಚಿತ ವಿದ್ಯುತ್ ಸರಬರಾಜು ನೀಡಲು ಮುಂದಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹೌದಾದಲ್ಲಿ ರಾಜ್ಯದಲ್ಲೂ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದಲ್ಲಿನ ರೈತರಿಗೆ ಉಚಿತ ವಿದ್ಯುತ್ ನೀಡಿದ್ದಲ್ಲಿ, ಸರ್ಕಾರದ ಮೇಲೆ ಬೀಳುವ ಅಧಿಕ ಹೊರೆಯೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯವು ರೈತರಿಗೆ ಉಚಿತ ವಿದ್ಯುತ್ ಸರಬರಾಜು ನೀಡಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಂತಹ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ

ಇ) ಪ್ರಸ್ತುತ ರೈತರಿಗೆ ಸರಬರಾಜು ಮಾಡುತ್ತಿರುವ 8395 ದಶಲಕ್ಷ ಯೂನಿಟ್‌ಗಳಿಗೆ ವಿದ್ಯುತ್‌ನ ವೆಚ್ಚ ಸುಮಾರು 2863 ಕೋಟಿ ರೂ.ಗಳಾಗಿರುತ್ತದೆ. ಇದರಲ್ಲಿ ಪಂಪು ಸೆಟ್ಟು ಮಾಲೀಕರುಗಳು ವಾರ್ಷಿಕ ರೂ. 540 ಪ್ರತಿ ಅಶ್ವ ಶಕ್ತಿಗೆ ಪಾವತಿಸಬೇಕಾಗಿರುತ್ತದೆ. ಇದರ ಮೊತ್ತವು ರೂ. 604 ಕೋಟಿಗಳಾಗುವುದು. ಉಳಿದ ಹಣವನ್ನು ಸರ್ಕಾರವೇ ಭರಿಸಬೇಕಾಗಿರುತ್ತದೆ. ಒಂದು ವೇಳೆ ಉಚಿತ ವಿದ್ಯುತ್ ನೀಡಿದಲ್ಲಿ ಸರ್ಕಾರದ ಮೇಲೆ ಪೂರ್ಣ ಹೊರೆ ಬೀಳುವುದು.

572(200) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೀರಾವರಿಗಾಗಿ ಯೋಜನೆಗಳ ಅನ್ವೇಷಣಾ ಕಾರ್ಯ ಕೈಗೊಂಡಿರುವುದು ನಿಜವೇ; (ವಿವರಗಳನ್ನು ನೀಡುವುದು);

ಆ) ಸದರಿ ಜಿಲ್ಲೆಗಳಲ್ಲಿ ಹರಿಯುತ್ತಿರುವ ನೀರನ್ನು ಬಳಸಲು ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ; (ವಿವರಗಳನ್ನು ನೀಡುವುದು);

ಇ) ನೇತ್ರಾವತಿ ಯೋಜನೆಯ ಕುರಿತಾಗಿ ಅಧ್ಯಯನ ನಡೆಸಲು ರಚಿಸಲಾದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ; (ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖೂರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ನಿಜ. ಅನ್ವೇಷಣೆಯಲ್ಲಿರುವ ಯೋಜನೆಗಳು ಈ ಕೆಳಕಂಡಂತಿವೆ:

1. ಸ್ವರ್ಣ, 2) ಕೊಲ್ಲೂರು 3) ಶಾಂಭವಿ 4) ಮಹಾದಾಯಿ ಮತ್ತು 5) ಬಾರಾವೆಳಿ

ಆ) ಅಧ್ಯಯನ ನಡೆಸುತ್ತಿದ್ದು, ಅಧ್ಯಯನ ಸಮಿತಿಯ ವರದಿಯು ಬಂದ ನಂತರ ನಿರ್ಧರಿಸಲಾಗುವುದು.

ಇ) ಪಶ್ಚಿಮಾಭಿಮುಖವಾಗಿ ಹರಿಯುವ ನದಿಯ ನೀರನ್ನು ಸಮಗ್ರವಾಗಿ ಬಳಸಲು ಕ್ಯಾಪ್ಟನ್ ಎಸ್. ರಾಜಾರಾವ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ತನ್ನ ವರದಿಯನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ.

573(826) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ವಿಧಾನಕ್ಷೇತ್ರದಲ್ಲಿನ ರಸ್ತೆಗಳು ಓಡಾಡಲು ಯೋಗ್ಯವಾಗಿಲ್ಲದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅವುಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;